**National**
**Kannada**
**06.04.2025 1935 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಪೋರ್ಚುಗಲ್, ಸ್ಲೋವಾಕಿಯಾಗೆ ಪ್ರವಾಸ: ಮೊದಲ ಚರಣದಲ್ಲಿ ಲಿಸ್ಬನ್‌ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಯಾಣ
2. ತಮಿಳುನಾಡಿನ ರಾಮೇಶ್ವರಂನಲ್ಲಿ ಪಂಬನ್ ಸೇತುವೆ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ
3. ದೇಶಾದ್ಯಂತ ರಾಮನವಮಿ ಆಚರಣೆ; ಅಯೋಧ್ಯೆಯಲ್ಲಿ ವಿಶೇಷ ಪೂಜೆ
4. ಫ್ರೆಡ್ ಡ್ಯಾರಿಂಗ್‌ಟನ್ ಸ್ಯಾಂಡ್ ಮಾಸ್ಟರ್ ಪ್ರಶಸ್ತಿಗೆ ಮರಳು ಕಲಾವಿದ ಸುದರ್ಶನ್ ಪಟ್ನಾಯಕ್ ಭಾಜನ
5. ಐಪಿಎಲ್ ಟಿ-೨೦ ಕ್ರಿಕೆಟ್: ಸನ್‌ರೈಸರ್ಸ್ ಹೈದರಾಬಾದ್- ಗುಜರಾತ್ ಟೈಟಾನ್ಸ್ ಮುಖಾಮುಖಿ

<><><><>

ಪೋರ್ಚುಗಲ್ ಹಾಗೂ ಸ್ಲೋವಾಕಿಯಾ ದೇಶಗಳಿಗೆ ಪ್ರವಾಸದ ಭಾಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು, ತಮ್ಮ ಮೊದಲ ಚರಣದಲ್ಲಿ ಇಂದು ಲಿಸ್ಬನ್‌ಗೆ ಪ್ರಯಾಣ ಆರಂಭಿಸಿದ್ದಾರೆ. ಪೋರ್ಚುಗಲ್ ಭೇಟಿಯ ವೇಳೆ ಅವರು, ಪೋರ್ಚುಗಲ್ ಅಧ್ಯಕ್ಷ ಮಾರ್ಸೆಲೊ ರೆಬೆಲೊ ಡೇ ಸೌಸಾ ಅವರೊಂದಿಗೆ ನಿಯೋಗ ಮಟ್ಟದ ಮಾತುಕತೆ ನಡೆಸಲಿದ್ದಾರೆ. ಇದೇ ವೇಳೆ ಅವರು, ಪೋರ್ಚುಗಲ್ ಪ್ರಧಾನಿ ಲೂಯಿಸ್ ಮಾಂಟೆನೆಗ್ರೊ ಅವರನ್ನು ಭೇಟಿಯಾಗಲಿದ್ದಾರೆ. ಸ್ಲೋವಾಕಿಯಾದಲ್ಲಿ ರಾಷ್ಟ್ರಪತಿ ಅವರು, ಸ್ಲೋವಾಕಿಯಾ ಅಧ್ಯಕ್ಷ ಪೀಟರ್ ಪೆಲೆಗ್ರಿನಿ ಮತ್ತು ಪ್ರಧಾನಿ ರಾಬರ್ಟ್ ಫಿಕೊ ಅವರನ್ನು ಭೇಟಿಯಾಗಲಿದ್ದಾರೆ.

<><><><>

ಕಳೆದ ೧೦ ವರ್ಷಗಳಲ್ಲಿ ಕೇಂದ್ರ ಸರ್ಕಾರವು ದೇಶದಲ್ಲಿ ಮೂಲಸೌಕರ್ಯಗಳನ್ನು ಬಲಪಡಿಸಲು ಸಮರ್ಪಿತ ಪ್ರಯತ್ನಗಳನ್ನು ಮಾಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ತಮಿಳುನಾಡಿನ ರಾಮೇಶ್ವರಂನಲ್ಲಿ ಇಂದು ಪಂಬನ್ ಸೇತುವೆ ಉದ್ಘಾಟಿಸಿ ಹಾಗೂ ೮ ಸಾವಿರದ ೩೦೦ ಕೋಟಿ ರೂಪಾಯಿ ಮೌಲ್ಯದ ವಿವಿಧ ಯೋಜನೆಗಳಿಗೆ ಅಡಿಪಾಯ ಹಾಕಿದ ಅವರು, ತಮಿಳುನಾಡಿನ ಅಭಿವೃದ್ಧಿಯು ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡುತ್ತಿದೆ. ಈ ಯೋಜನೆಗಳು

ರಾಮನವಮಿಯ ಉಡುಗೊರೆಯಾಗಿದೆ ಎಂದರು. ರಾಮೇಶ್ವರಂನಲ್ಲಿ ಜನಿಸಿದ ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರನ್ನು ಸ್ಮರಿಸಿದ ಪ್ರಧಾನಿ, ಅಬ್ದುಲ್ ಕಲಾಂ ಅವರ ಜೀವನವು, ವಿಜ್ಞಾನವು ಆಧ್ಯಾತ್ಮಿಕತೆಯೊಂದಿಗೆ ಹೇಗೆ ಸಂಪರ್ಕ ಹೊಂದಿದೆ ಎಂಬುದನ್ನು ತೋರಿಸಿದೆ ಎಂದು ಹೇಳಿದರು. ಪಂಬನ್ ಸಮುದ್ರ ಸೇತುವೆಯನ್ನು ೨೦ನೇ ಶತಮಾನದ ಅದ್ಭುತ ಎಂದು ಬಣ್ಣಿಸಿದ ಅವರು, ಇದು ವ್ಯಾಪಾರ ಮತ್ತು ಪ್ರವಾಸೋದ್ಯಮವನ್ನು ಸುಗಮಗೊಳಿಸುತ್ತದೆ ಹಾಗೂ ಜನರಿಗೆ ಉದ್ಯೋಗಗಳನ್ನು ಒದಗಿಸುತ್ತದೆ ಎಂದು ಅವರು ತಿಳಿಸಿದರು. ದೇಶದ ರಸ್ತೆ, ವಿಮಾನ ನಿಲ್ದಾಣ, ಬಂದರು, ಇಂಧನ ಮತ್ತು ಮೂಲಸೌಕರ್ಯಕ್ಕಾಗಿ ಅನುದಾನ ಹಂಚಿಕೆಯಲ್ಲಿ ೬ ಪಟ್ಟು ಹೆಚ್ಚಳ ಕಂಡಿದೆ. ಪೂರ್ವ ಮತ್ತು ಪಶ್ಚಿಮ ಸರಕು ಸಾಗಣೆ ಕಾರಿಡಾರ್, ವಂದೇ ಭಾರತ್, ಅಮೃತ್ ಭಾರತ್ ಮತ್ತು ನಮೋ ಭಾರತ್ ರೈಲ್ವೆ ಸೇವೆಗಳು, ಉತ್ತಮ ಸರಕು ಸಾಗಣೆ ಮತ್ತು ಮೂಲಸೌಕರ್ಯವನ್ನು ಒದಗಿಸುತ್ತವೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು.

ಧ್ವನಿ : ಪ್ರಧಾನಿ (೨೫ ಸೆಕೆಂಡ್‌ಗಳು)

<><><><>

ಚೈತ್ರ ಮಾಸದ ೯ನೇ ದಿನವಾದ ಇಂದು ದೇಶಾದ್ಯಂತ ಶ್ರೀ ರಾಮನವಮಿ ಆಚರಿಸಲಾಯಿತು. ಈ ಹಬ್ಬ ಭಗವಾನ್ ಶ್ರೀರಾಮ ದೇವರ ಜನ್ಮದಿನದ ಆಚರಣೆಯಾಗಿದೆ. ಶ್ರೀ ರಾಮನವಮಿ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ದೇಶದ ಸಮಸ್ತ ಜನತೆಗೆ ಶುಭಾಶಯ ಕೋರಿದ್ದಾರೆ. ಭಗವಾನ್ ರಾಮ ದೇವರ ಜೀವನದ ಪಯಣ ಸತ್ಯ, ಧರ್ಮ ಹಾಗೂ ನೈತಿಕ ಮೌಲ್ಯಕ್ಕೆ ಪ್ರತೀಕವಾಗಿದೆ. ಮಾನವ ಜನಾಂಗಕ್ಕೆ ಬದ್ಧತೆ ಹಾಗೂ ನಿಸ್ವಾರ್ಥದಿಂದ ಸೇವೆ ಸಲ್ಲಿಸುವ ಸಂದೇಶವನ್ನು ಶ್ರೀ ರಾಮನವಮಿ ಉತ್ಸವ ನೀಡುತ್ತದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಶ್ರೀ ರಾಮನವಮಿ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ, ದೇಶದ ಸಮಸ್ತ ಜನತೆಗೆ ಶುಭಾಶಯ ಕೋರಿದ್ದಾರೆ. ಪ್ರಭು ಶ್ರೀ ರಾಮನ ಅನುಗ್ರಹ ನಮ್ಮೆಲ್ಲರ ಮೇಲೆ ಸದಾ ಇರಲಿದ್ದು, ಜೀವನದ ಪಯಣಕ್ಕೆ ದಾರಿ ದೀಪವಾಗಲಿದೆ ಎಂದು ಹೇಳಿದ್ದಾರೆ.

<><><><>

ರಾಮನಗರಿ ಅಯೋಧ್ಯೆಯಲ್ಲಿ ಭಗವಾನ್ ರಾಮನ ಜನ್ಮೋತ್ಸವವನ್ನು ಆಚರಿಸಲಾಗುತ್ತಿದೆ. ದೇಶದ ಮೂಲೆ ಮೂಲೆಗಳಿಂದ ಭಕ್ತರು ಅಯೋಧ್ಯೆಗೆ ಆಗಮಿಸಿದ್ದಾರೆ. ಶ್ರೀ ರಾಮ ಜನ್ಮಭೂಮಿ ದೇವಾಲಯವನ್ನು ವಿಶೇಷ ಹೂವುಗಳಿಂದ ಅಲಂಕರಿಸಲಾಗಿತ್ತು. ಬಾಲರಾಮನಿಗೆ ೫೬ ವಿಶಿಷ್ಟ ಬಗೆಯ ನೈವೇದ್ಯಗಳನ್ನು ಅರ್ಪಿಸಲಾಯಿತು. ಇಂದು ರಾಮಲಲ್ಲಾ ಹಣೆಯ ಮೇಲೆ ಸುಮಾರು ೪ ನಿಮಿಷಗಳ ಕಾಲ ಸೂರ್ಯ ರಶ್ಮಿ ಸ್ಪರ್ಶ ಮಾಡಿತು. ಸರಯು ನದಿಯ ನೀರನ್ನು ಡ್ರೋನ್ ಮೂಲಕ ಭಕ್ತರ ಮೇಲೆ ಸಿಂಪಡಿಸಲಾಯಿತು. ಇದೇ ವೇಳೆ ಅಯೋಧ್ಯೆಯಲ್ಲಿ ದೀಪೋತ್ಸವ ನಡೆಯುತ್ತಿದೆ.

<><><><>

ಮರಳು ಕಲೆಗೆ ನೀಡಿದ ಅತ್ಯುತ್ತಮ ಕೊಡುಗೆಗಳಿಗಾಗಿ ಪ್ರತಿಷ್ಠಿತ ಫ್ರೆಡ್ ಡ್ಯಾರಿಂಗ್ ಟನ್ ಸ್ಯಾಂಡ್ ಮಾಸ್ಟರ್ ಪ್ರಶಸ್ತಿಯನ್ನು ಪಡೆದ ಮೊದಲ ಭಾರತೀಯ ಮರಳು ಕಲಾವಿದ ಎಂಬ ಅಭಿದಾನಕ್ಕೆ ಸುದರ್ಶನ್ ಪಟ್ನಾಯಕ್ ಪಾತ್ರರಾಗಿದ್ದಾರೆ. ಇಂಗ್ಲೆಂಡ್‌ನ ಡಾಸರ್ಟ್‌ನಲ್ಲಿ ನಡೆದ ಸ್ಯಾಂಡ್ ವರ್ಲ್ಡ್ - ೨೦೨೫ ಅಂತಾರಾಷ್ಟ್ರೀಯ ಮರಳು ಕಲಾ ಉತ್ಸವದಲ್ಲಿ ಈ ಪ್ರಶಸ್ತಿಯನ್ನು ಅವರಿಗೆ ಪ್ರದಾನ ಮಾಡಲಾಯಿತು. ವಿಶ್ವ ಶಾಂತಿಯ ಸಂದೇಶವನ್ನು ಹೊತ್ತ ೧೦ ಅಡಿ ಎತ್ತರದ ಗಣೇಶ ಶಿಲ್ಪವನ್ನು ಸುದರ್ಶನ್ ಪಾಟ್ನಾಯಕ್ ರಚಿಸಿದ್ದರು. ಪ್ರಸಿದ್ಧ ಬ್ರಿಟಿಷ್ ಶಿಲ್ಪಿ ಫ್ರೆಡ್ ಡ್ಯಾರಿಂಗ್ ಟನ್ ಅವರ ೧೦೦ನೇ ಜನ್ಮ ವಾರ್ಷಿಕೋತ್ಸವದ ಸ್ಮರಣಾರ್ಥ ಈ ಉತ್ಸವವನ್ನು ಆಯೋಜಿಸಲಾಗಿತ್ತು. ಒಡಿಶಾದ ಪದ್ಮಶ್ರೀ ಪುರಸ್ಕೃತ ಸುದರ್ಶನ್ ಪಟ್ನಾಯಕ್, ೬೫ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಮರಳು ಕಲಾ ಉತ್ಸವಗಳು ಮತ್ತು ಚಾಂಪಿಯನ್‌ಶಿಪ್‌ಗಳಲ್ಲಿ ಭಾಗವಹಿಸಿದ್ದಾರೆ.

<><><>

ಭೂಕಂಪ ಪೀಡಿತ ಮ್ಯಾನ್ಮಾರ್‌ನಲ್ಲಿ ನಿಯೋಜಿಸಲಾದ ಭಾರತೀಯ ಸೇನಾ ಆಸ್ಪತ್ರೆ ಘಟಕಕ್ಕೆ ಭಾರತವು ೩೧ ಟನ್‌ಗಳಷ್ಟು ಮಾನವೀಯ ನೆರವನ್ನು ಒದಗಿಸಿದೆ. ಗಾಜಿಯಾಬಾದ್‌ನ ಹಿಂಡನ್ ವಾಯು ನೆಲೆಯಿಂದ ಸರಕು ಸಾಗಣೆ ವಿಮಾನ ಸಿ-೧೭ ಗ್ಲೋಬ್ ಮಾಸ್ಟರ್ ಮೂಲಕ ಮ್ಯಾನ್ಮಾರ್‌ನ ಮಂಡಲೆಗೆ ಮಾನವೀಯ ನೆರವನ್ನು ಕಳುಹಿಸಲಾಯಿತು. ಈ ಕುರಿತು ಸಾಮಾಜಿಕ ಜಾಲತಾಣದ ತಮ್ಮ ಪೋಸ್ಟ್‌ನಲ್ಲಿ ಮಾಹಿತಿ ನೀಡಿದ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್, ಅಪರೇಶನ್ ಬ್ರಹ್ಮ ಅಡಿಯಲ್ಲಿ ಮ್ಯಾನ್ಮಾರ್‌ಗೆ ೩೧ ಟನ್ ಮಾನವೀಯ ನೆರವು ಒದಗಿಸಲಾಗಿದೆ ಎಂದು ತಿಳಿಸಿದ್ದಾರೆ.

<><><>

ಅಧಿಕಾರ ಮತ್ತು ಸ್ಥಾನಕ್ಕಾಗಿ ಬಿಜೆಪಿ ತನ್ನ ಸಿದ್ಧಾಂತದೊಂದಿಗೆ ಎಂದಿಗೂ ರಾಜೀ ಮಾಡಿಕೊಂಡಿಲ್ಲ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹೇಳಿದ್ದಾರೆ. ನವದೆಹಲಿಯ ಬಿಜೆಪಿ ಪ್ರಧಾನ ಕಚೇರಿಯಲ್ಲಿಂದು ಪಕ್ಷದ ೪೫ನೇ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ಪಕ್ಷದ ಸಿದ್ಧಾಂತವು ಭಾರತೀಯ ಸಂಪ್ರದಾಯ ಮತ್ತು ಸಂಸ್ಕೃತಿಯೊಂದಿಗೆ ಸಂಯೋಜಿತವಾಗಿದೆ ಎಂದರು. ಬಿಜೆಪಿಯು ಕೇಡರ್ ಆಧಾರಿತ ಮತ್ತು ಸಮೂಹ ಆಧಾರಿತ ಪಕ್ಷವಾಗಿದ್ದು, ಅಂತರ್ಗತ ಮತ್ತು ಮಾನವೀಯ ಬೆಳವಣಿಗೆಗೆ ಬದ್ಧವಾಗಿದೆ. ಇದು ವಿಶ್ವದ ಅತಿದೊಡ್ಡ ರಾಜಕೀಯ ಪಕ್ಷವಾಗಲು ಅವಕಾಶ ಮಾಡಿಕೊಟ್ಟಿದೆ ಎಂದು ಜೆ.ಪಿ. ನಡ್ಡಾ ಹೇಳಿದರು.

<><><>

ಭಾರತೀಯ ರೈತರ ರಸಗೊಬ್ಬರ ಸಹಕಾರ ನಿಯಮಿತ - ಇಫ್ಕೊದ ಸಂಶೋಧನೆ ಮತ್ತು ಅಭಿವೃದ್ಧಿಯಿಂದಾಗಿ ಇಂದು ನ್ಯಾನೊ ಯೂರಿಯಾ ಮತ್ತು ನ್ಯಾನೊ ಡಿಎಪಿ, ವಿಶ್ವದಲ್ಲಿ ಭಾರತದ ಖ್ಯಾತಿಯನ್ನು ಹೆಚ್ಚಿಸಿವೆ ಎಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಹೇಳಿದ್ದಾರೆ. ಗುಜರಾತ್‌ನ ಗಾಂಧೀನಗರದ ಇಫ್ಕೊ ಸುವರ್ಣ ಮಹೋತ್ಸವ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು, ಆಧುನಿಕ ಪ್ರಯೋಗಾಲಯ ಪರೀಕ್ಷೆಗಳನ್ನು ಕೃಷಿ ಕ್ಷೇತ್ರಕ್ಕೆ ಅನುಷ್ಠಾನಗೊಳಿಸುವಲ್ಲಿ ಇಫ್ಕೊ ಉತ್ತಮ ಕೆಲಸ ಮಾಡಿದೆ ಎಂದರು. ಇದೇ ವೇಳೆ ಸಚಿವ ಅಮಿತ್ ಶಾ, ಇಫ್ಕೊ ಬಿತ್ತನೆ ಬೀಜ ಸಂಶೋಧನಾ ಘಟಕವನ್ನು ಉದ್ಘಾಟಿಸಿದರು.

<><><>

ಗಾಜಾದಲ್ಲಿ ಬಂಧನದಲ್ಲಿರುವ ಎಲ್ಲ ಒತ್ತೆಯಾಳುಗಳ ಬಿಡುಗಡೆಗಾಗಿ ಹಮಾಸ್ ಜೊತೆ ಮಾತುಕತೆ ನಡೆಸುವಂತೆ ಇಸ್ರೇಲ್ ಸರ್ಕಾರವನ್ನು ಒತ್ತಾಯಿಸಿ, ಸಾವಿರಾರು ಇಸ್ರೇಲಿಗರು ತಮ್ಮ ಪ್ರತಿಭಟನೆ ಮುಂದುವರೆಸಿದ್ದಾರೆ. ಟೆಲ್ ಅವಿವ್‌ನಲ್ಲಿ ಇಂದು ನಡೆದ ಪ್ರತಿಭಟನಾ ರ್‍ಯಾಲಿಯಲ್ಲಿ, ಹಮಾಸ್‌ನೊಂದಿಗೆ ಕದನ ವಿರಾಮ ಘೋಷಿಸಿ, ಮಾತುಕತೆ ನಡೆಸುವಂತೆ ಇಸ್ರೇಲ್ ಸರ್ಕಾರವನ್ನು ಪ್ರತಿಭಟನಾಕಾರರು ಒತ್ತಯಿಸಿದರು. ಇನ್ನೊಂದೆಡೆ ಇಸ್ರೇಲ್ ವಾಯು ದಾಳಿಯಿಂದಾಗಿ ಕಳೆದ ೨೪ ಗಂಟೆಗಳಲ್ಲಿ ೬೪ ಮಂದಿ ಮೃತಪಟ್ಟಿದ್ದಾರೆ ಎಂದು ಗಾಜಾದ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು, ನಾಳೆ ಅಮೆರಿಕದ ಶ್ವೇತ ಭವನಕ್ಕೆ ಭೇಟಿ ನೀಡಿ, ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಮಾತುಕತೆಯಲ್ಲಿ ಗಾಜಾ ಕದನ ವಿರಾಮವು ಪ್ರಮುಖ ವಿಷಯವಾಗುವ ಸಾಧ್ಯತೆಯಿದೆ.

<><><>

ಅಮೆರಿಕದ ಟೆಕ್ಸಾಸ್ ಮತ್ತು ಓಹಿಯೊದಲ್ಲಿ ಚಂಡಮಾರುತಕ್ಕೆ ಕನಿಷ್ಠ ೧೬ ಜನರು ಸಾವನಪ್ಪಿದ್ದಾರೆ. ಇದೇ ವೇಳೆ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿರುವ ಭಾರೀ ಮಳೆಯಿಂದಾಗಿ ಈ ಪ್ರದೇಶದಲ್ಲಿ ಪ್ರವಾಹದ ಪರಿಸ್ಥಿತಿ ನಿರ್ಮಾಣಗೊಂಡಿದೆ.

<><><>

ಹೈದರಾಬಾದ್‌ನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಇಂದು ನಡೆಯುತ್ತಿರುವ ಇಂಡಿಯನ್ ಪ್ರೀಮಿಯರ್ ಲೀಗ್ - ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಸನ್ ರೈಸರ್ಸ್ ಹೈದರಾಬಾದ್ ಮತ್ತು ಗುಜರಾತ್ ಟೈಟಾನ್ಸ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಗುಜರಾತ್ ಟೈಟಾನ್ಸ್, ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>